

بِسْمِ اللّٰہِ الرَّحْمٰنِ الرَّحِیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–06–2019** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

*(ತಶಹ್ಹುದ್, ತಅವ್ವುದ್. ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದಿನಿಂದ ಬದರೀ ಸಹಾಬರ ಸ್ಮರಣೆಯನ್ನು ಪುನಃ ಪ್ರಾರಂಭಿಸುವೆನು. ಈ ದಿನ ನಾನು ಪ್ರಸ್ತಾಪಿಸಲಿರುವ ಸಹಾಬರಲ್ಲಿ ಮೊದಲನೆಯವರು ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್(ರ). ಹಝ್ರತ್ ಮುಅತಿಬ್ ಬಿನ್ ಉಬೈದ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್(ರ)ರವರ ಅಖ್ಯಾನಿ ಸಹೋದರರಾಗಿದ್ದರು. (ಎಂದರೆ ತಾಯಿ ಒಬ್ಬಳೇ ತಂದೆ ಬೇರೆ). ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್ ಮತ್ತು ಹಝ್ರತ್ ಮುಅತಿಬ್ ಬಿನ್ ಉಬೈದ್ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ರಜೀಅ್ ಘಟನೆಯ ದಿನ ಈ ಇಬ್ಬರು ಸಹೋದರರು ಶಹೀದರಾದರು. ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ ವರ್ಷ 3ರ ಕೊನೆಯ ಭಾಗದಲ್ಲಿ ಅಝ್‌ಲ್ ಮತ್ತು ಖಾರ ಗೋತ್ರದ ಕೆಲವು ಜನರ ಬಳಿಗೆ ಕಳುಹಿಸಿದ ಆರು ಸಹಾಬರಲ್ಲಿ, ಕೆಲವು ವರದಿಗಳ ಪ್ರಕಾರ ಹತ್ತು ಸಹಾಬರಲ್ಲಿ ಒಬ್ಬರಾಗಿದ್ದರು. ಆ ಗೋತ್ರಗಳ ಜನರಿಗೆ ಇಸ್ಲಾಮ್ ಧರ್ಮದ ಬಗ್ಗೆ ಮನವರಿಕೆ ಮಾಡಿಕೊಡುವುದು ಹಾಗೂ ಅವರಿಗೆ ಪವಿತ್ರ ಖುರ್‌ಆನ್ ಮತ್ತು ಇಸ್ಲಾಮೀ ಶರೀಅತ್ ಬಗ್ಗೆ ಶಿಕ್ಷಣ ನೀಡುವುದು ಉದ್ದೇಶವಾಗಿತ್ತು. ಈ ಸಹಾಬರು ಹಿಜಾಝ್‌ನಲ್ಲಿರುವ ಒಂದು ನೀರಿನ ಝರಿಯಾದ ರಜೀಅ್‌ಗೆ ತಲಪಿದಾಗ ರಜೀಅ್ ನೀರಿನ ಝರಿಯ ಮಾಲಿಕತ್ವವನ್ನು ಹೊಂದಿದ ಹಝೀಲ್ ಗೋತ್ರದ ಜನರು ಉದ್ಧಟರಾಗಿ ಸಹಾಬರನ್ನು ಸುತ್ತುವರಿದರು. ಅವರು ವಿದ್ರೋಹ ಮಾಡುತ್ತಾ ಸಹಾಬರೊಂದಿಗೆ ಖಡ್ಗ ಯುದ್ಧ ನಡೆಸಿದರು. ಆ ಸಹಾಬರಲ್ಲಿ ಏಳು ಜನರ ಹೆಸರು ಹೀಗಿದೆ: ಹಝ್ರತ್ ಆಸಿಮ್ ಬಿನ್ ಸಾಬಿತ್, ಹಝ್ರತ್ ಮುರ್‌ಸಿದ್ ಬಿನ್ ಅಬೂ ಮುರ್‌ಸಿದ್, ಹಝ್ರತ್ ಖುಬೀಬ್ ಬಿನ್ ಅದೀ, ಹಝ್ರತ್ ಖಾಲಿದ್ ಬಿನ್ ಬುಕೈರ್, ಹಝ್ರತ್ ಝೈದ್ ಬಿನ್ ದಸ್‌ನ, ಹಝ್ರತ್ ಅಬ್ದುಲ್ಲಾ ಬಿನ್ ತಾರಿಕ್ ಮತ್ತು ಹಝ್ರತ್ ಮುಅತಿಬ್ ಬಿನ್ ಉಬೈದ್.

ಈ ಸಹಾಬರ ಪೈಕಿ ಹಝ್ರತ್ ಮುರ್‌ಸಿದ್, ಹಝ್ರತ್ ಖಾಲಿದ್, ಹಝ್ರತ್ ಆಸಿಮ್ ಮತ್ತು ಹಝ್ರತ್ ಮುಅತಿಬ್ ಬಿನ್ ಉಬೈದ್ ಅಲ್ಲಿಯೇ ಶಹೀದರಾದರು, ಹಝ್ರತ್ ಖುಬೀಬ್, ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್ ಮತ್ತು ಹಝ್ರತ್ ಝೈದ್ ಆಯುಧಗಳನ್ನು ಕೆಳಗೆ ಹಾಕಿದಾಗ ಅವಿಶ್ವಾಸಿಗಳು ಅವರನ್ನು ಬಂಧಿಸಿ ಮಕ್ಕದ ಕಡೆಗೆ ಕರೆದುಕೊಂಡು ಹೋಗುವಾಗ ಮಕ್ಕದಿಂದ ಐದು ಮೈಲು ದೂರವಿರುವ ಝುಹ್ರಾನ್ ಎಂಬಲ್ಲಿಗೆ ತಲಪಿದಾಗ ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್ ತನ್ನನ್ನು ಕಟ್ಟಿದ ಹಗ್ಗವನ್ನು ಬಿಚ್ಚಲು ಸಮರ್ಥರಾದರು. ಅವರು ತನ್ನ ಖಡ್ಗವನ್ನು ಕೈಯಲ್ಲಿ ಎತ್ತಿಕೊಂಡರು. ಆಗ ಬಹುದೇವಾರಾಧಕರು ಅವರಿಂದ ದೂರ ಸರಿದು ಅವರ ಮೇಲೆ ಕಲ್ಲೆಸೆಯಲು ಪ್ರಾರಂಭಿಸಿದರು. ಕಲ್ಲೆಸೆತದಿಂದ ಗಾಯಗೊಂಡು ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್ ಶಹೀದರಾದರು. ಅವರ ಗೋರಿ ಝುಹ್ರಾನ್‌ನಲ್ಲಿದೆ. ಹಿಜ್‌ರತ್‌ನ ನಂತರದ 36ನೇ ತಿಂಗಳಲ್ಲಿ ಸಫರ್ ತಿಂಗಳಲ್ಲಿ ರಜೀಅ ಘಟನೆ ಸಂಭವಿಸಿತು.

ರಜೀಅ್ ಘಟನೆ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಬರೆದಿದ್ದಾರೆ: ಹಿಜರಿ ನಾಲ್ಕನೆಯ ವರ್ಷದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹತ್ತು ಸಹಾಬರ ಒಂದು ಗುಂಪನ್ನು ಸಿದ್ಧಪಡಿಸಿ ಹಝ್ರತ್ ಆಸಿಮ್ ಬಿನ್ ಸಾಬಿತ್‌ರನ್ನು ಅದರ ಅಮೀರರನ್ನಾಗಿ ನೇಮಿಸಿದರು. ಅವರು ಮಕ್ಕದ ಸಮೀಪಕ್ಕೆ ಹೋಗಿ ಖುರೈಶಿ ಜನರ ಚಲನ ವಲನವನ್ನು ನಿರೀಕ್ಷಿಸಬೇಕೆಂದು ನಿರ್ದೇಶಿಸಿದರು. ಈ ಜನರ ಗುಂಪು ಹೊರಡುವ ಮೊದಲೇ ಅಝ್‌ಲ್ ಮತ್ತು ಖಾರ ಗೋತ್ರದ ಕೆಲವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ನಮ್ಮ ಗೋತ್ರದ ಅನೇಕ ಜನರು ಇಸ್ಲಾಮಿನ ಕಡೆಗೆ ಒಲವನ್ನು ಹೊಂದಿದ್ದಾರೆ. ನಮಗೆ ಇಸ್ಲಾಮಿನ ಬಗ್ಗೆ ಅರಿವು ನೀಡಲು ನಮ್ಮೊಂದಿಗೆ ಕೆಲವರನ್ನು ಕಳುಹಿಸಿರಿ. ಅವರ ಮೂಲಕ ಅರಿವು ಗಳಿಸಿ ನಾವು ಮುಸ್ಲಿಮರಾಗುವೆವು ಎಂದು ಹೇಳಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದ ಕಡೆಗೆ ಅವಿಶ್ವಾಸಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸಿದ್ಧಪಡಿಸಿದ ತಂಡವನ್ನೇ ಅವರ ಜೊತೆಗೆ ಕಳುಹಿಸಿದರು. ಆದರೆ ಈ ಬೇಡಿಕೆ ಸಲ್ಲಿಸಿದ ಜನರು ಸುಳ್ಳುಗಾರರಾಗಿದ್ದರು ಎಂದು ಅನಂತರ ಸಾಬೀತಾಯಿತು. ಬನೂ ಲಹ್‌ಯಾನ್ ಗೋತ್ರದವರು ತಮ್ಮ ನಾಯಕ ಸುಫ್‌ಯಾನ್ ಬಿನ್ ಖಾಲಿದ್‌ನನ್ನು ಮುಸ್ಲಿಮರು ಹತ್ಯೆ ಮಾಡಿದುದಕ್ಕೆ ಪ್ರತೀಕಾರವಾಗಿ ಈ ಕುತಂತ್ರ ಹೂಡಿದ್ದರು. ಕೆಲವು ಮುಸ್ಲಿಮರು ಈ ಕಾರಣದಿಂದ ಮದೀನದಿಂದ ಹೊರಗೆ ಬಂದರೆ ಅವರನ್ನು ಹತ್ಯೆ ಮಾಡಬಹುದು ಎಂದು ಅವರು ಉಪಾಯ ಹೂಡಿದ್ದರು. ಬನೂ ಲಹ್‌ಯಾನ್ ಗೋತ್ರದ ಜನರು ಅಝ್‌ಲ್ ಮತ್ತು ಖಾರದ ಜನರಿಗೆ ಅನೇಕ ಒಂಟೆಗಳನ್ನು ಪ್ರತಿಫಲವಾಗಿ ಕೊಡುವುದಾಗಿ ನಿಶ್ಚಯಿಸಲಾಗಿತ್ತು. ಅಝ್‌ಲ್ ಮತ್ತು ಖಾರ ಗೋತ್ರದ ಈ ವಿದ್ರೋಹಿ ಜನರು ಅಸ್‌ಫಾನ್ ಮತ್ತು ಮಕ್ಕದ ಮಧ್ಯೆ ಒಂದು ಸ್ಥಳಕ್ಕೆ ತಲಪಿದಾಗ ಅವರು ಅಬೂ ಲಹ್‌ಯಾನ್ ಗೋತ್ರದ ಜನರಿಗೆ ರಹಸ್ಯವಾಗಿ ಸಂದೇಶ ಕಳುಹಿಸಿದರು. ನಮ್ಮ ಜೊತೆಗೆ ಮುಸ್ಲಿಮರನ್ನು ಕರೆದುಕೊಂಡು ಬಂದಿದ್ದೇವೆ ನೀವು ಪ್ರತೀಕಾರ ಮಾಡಲು ಬನ್ನಿರಿ. ಆಗ ಬನೂ ಲಹ್‌ಯಾನ್ ಗೋತ್ರದ ಇನ್ನೂರು ಯುವಕರು – ಅವರಲ್ಲಿ ಒಂದುನೂರು ಜನರು ಬಾಣ ಹೂಡುವವರಾಗಿದ್ದರು – ಮುಸ್ಲಿಮರನ್ನು ಬೆನ್ನಟ್ಟಿದರು. ರಜೀಅ್‌ನಲ್ಲಿ ಅವರು ಮುಸ್ಲಿಮರಿಗೆ ಎದುರಾದರು. ಆಗ ಮುಸ್ಲಿಮರು ಒಂದು ಬೆಟ್ಟವನ್ನೇರಿ

ಹೋರಾಡಲು ಸಿದ್ಧತೆ ನಡೆಸಿದರು. ಅವಿಶ್ವಾಸಿಗಳು ಮೋಸ ಮಾಡುವುದನ್ನು ತಪ್ಪೆಂದು ಭಾವಿಸುತ್ತಿರಲಿಲ್ಲ. ಅವರು ಮುಸ್ಲಿಮರೊಂದಿಗೆ ಹೇಳಿದರು: ನೀವು ಬೆಟ್ಟದಿಂದ ಇಳಿದು ಬನ್ನಿರಿ. ನಿಮ್ಮನ್ನು ನಾವು ಕೊಲ್ಲುವುದಿಲ್ಲ ಎಂದು ದೃಢ ಪ್ರತಿಜ್ಞೆ ಮಾಡುತ್ತೇವೆ. ಆಗ ಆಸಿಮ್ ಹೇಳಿದರು: ನಮಗೆ ನಿಮ್ಮ ವಾಗ್ದಾನ, ಪ್ರತಿಜ್ಞೆ ಮೊದಲಾದುವುಗಳ ಬಗ್ಗೆ ನಂಬಿಕೆ ಇಲ್ಲ. ಅನಂತರ ಹಝ್ರತ್ ಆಸಿಮ್ ಆಕಾಶದ ಕಡೆಗೆ ಮುಖ ತಿರುಗಿಸಿ ಹೇಳಿದರು: ಓ ಅಲ್ಲಾಹ್, ನೀನು ನಮ್ಮ ಸ್ಥಿತಿಯನ್ನು ನೋಡುತ್ತಿರುವೆ. ನೀನು ನಮ್ಮ ಸ್ಥಿತಿಯನ್ನು ಪೈಗಂಬರರಿಗೆ ತಿಳಿಸು.

ಹಝ್ರತ್ ಆಸಿಮ್(ರ) ಮತ್ತು ಅವರ ಜೊತೆಗಿದ್ದವರು ಶತ್ರುಗಳೊಂದಿಗೆ ಹೋರಾಡಿ ಶಹೀದರಾದರು. ಏಳು ಮಂದಿ ಸಹಾಬರು ಶಹೀದರಾದರು. ಹಝ್ರತ್ ಖುಬೀಬ್ ಬಿನ್ ಅದೀ, ಹಝ್ರತ್ ಝೈದ್ ಬಿನ್ ದಸ್ನ ಮತ್ತು ಅಬ್ದುಲ್ಲ ಬಿನ್ ತಾರಿಖ್ ಶಹೀದರಾಗದೆ ಬಾಕಿಯಾದರು. ಅವಿಶ್ವಾಸಿಗಳು ಸಹಾಬರನ್ನು ಜೀವಂತವಾಗಿ ಬಂಧಿಸಲು ಇಚ್ಛಿಸಿದ್ದರು. ಅವಿಶ್ವಾಸಿಗಳು ಮುಸ್ಲಿಮರನ್ನು ಕೂಗಿ ಕರೆದು ಹೇಳಿದರು: ಈಗಲಾದರೂ ನೀವು ಕೆಳಗೆ ಇಳಿದು ಬನ್ನಿರಿ ನಿಮಗೆ ಯಾವ ಕಷ್ಟವನ್ನೂ ನೀಡುವುದಿಲ್ಲ. ಮುಸ್ಲಿಮರು ಅವಿಶ್ವಾಸಿಗಳ ವಾಗ್ದಾನಗಳ ಬಗ್ಗೆ ಈ ಸಾರಿ ನಂಬಿಕೆ ಹೊಂದಿ ಬೆಟ್ಟದಿಂದ ಇಳಿದು ಬಂದರು. ಆದರೆ ಅವರು ಇಳಿದು ಬಂದ ಕೂಡಲೆ ಅವಿಶ್ವಾಸಿಗಳು ತಮ್ಮ ಬಿಲ್ಲು ಬಾಣದ ಹಗ್ಗದಿಂದ ಅವರನ್ನು ಕಟ್ಟದರು. ಆಗ ಮುಸ್ಲಿಮರು ಹೇಳಿದರು: ನೀವು ವಾಗ್ದಾನ ಉಲ್ಲಂಘಿಸಿರುವಿರಿ. ಇನ್ನು ಮುಂದೆ ಏನೆಲ್ಲಾ ಮಾಡುವಿರಿ. ಅಬ್ದುಲ್ಲಾ ಬಿನ್ ತಾರಿಖ್ ಅವರೊಂದಿಗೆ ನಡೆದು ಹೋಗಲು ನಿರಾಕರಿಸಿದಾಗ ಅವಿಶ್ವಾಸಿಗಳು ಅವರನ್ನು ಸ್ವಲ್ಪ ಸಮಯ ಎಳೆದುಕೊಂಡು ಹೋದರು ಮತ್ತು ಅನಂತರ ಕೊಂದು ಅಲ್ಲೇ ಎಸೆದರು. ಒಂದು ವರದಿ ಪ್ರಕಾರ ಅಬ್ದುಲ್ಲಾ ಬಿನ್ ತಾರಿಖ್ ತಮ್ಮನ್ನು ಬಿಗಿದ ಹಗ್ಗದ ಕಟ್ಟು ಬಿಡಿಸಿದ್ದರು ಮತ್ತು ಹೋರಾಡಲು ಸಿದ್ಧರಾದರು. ಆಗ ಅವಿಶ್ವಾಸಿಗಳು ಅವರಿಗೆ ಕಲ್ಲೆಸೆದು ಶಹೀದರನ್ನಾಗಿ ಮಾಡಿದರು. ಖುಬೀಬ್ ಮತ್ತು ಝೈದರನ್ನು ಕರೆದುಕೊಂಡು ಮಕ್ಕಕ್ಕೆ ಹೋಗಿ ಖುರೈಶಿಗಳಿಗೆ ಅವರನ್ನು ಮಾರಾಟ ಮಾಡಿದರು. ಒಟ್ಟಾರೆ, ಹಝ್ರತ್ ಅಬ್ದುಲ್ಲಾ ಬಿನ್ ತಾರಿಖ್ ರಜೀಅ್ ಘಟನೆಯಲ್ಲಿ ಅವಿಶ್ವಾಸಿಗಳೊಂದಿಗೆ ಹೋಗಲು ನಿರಾಕರಿಸಿದ್ದರು ಮತ್ತು ಅಲ್ಲಿಯೇ ಹೋರಾಡಿ ಶಹೀದರಾದರು.

ನಾನು ಪ್ರಸ್ತಾಪಿಸುವ ಎರಡನೆಯ ಸಹಾಬಿ ಹಝ್ರತ್ ಆಖಿಲ್ ಬಿನ್ ಬುಕೈರ್(ರ). ಅವರು ಬನೂ ಸಅದ್ ಬಿನ್ ಲೈಸ್ ಗೋತ್ರದವರಾಗಿದ್ದರು. ಅವರ ಮೊದಲಿನ ಹೆಸರು ಗಾಫಿಲ್ ಎಂದಾಗಿತ್ತು. ಅವರು ಮುಸ್ಲಿಮರಾದಾಗ ಅವರ ಹೆಸರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಖಿಲ್ ಎಂದು ಬದಲಾಯಿಸಿದರು. ಅವರ ಪಿತ ಬುಕೈರ್ ಅಜ್ಞಾನ ಕಾಲದಲ್ಲಿ ಹಝ್ರತ್ ಉಮರ್(ರ)ರವರ ಹಿರಿಯಜ್ಜ ನಫೀಲ್ ಬಿನ್ ಅಬ್ದುಲ್ ಉಝ್ಝಾರೊಂದಿಗೆ ಪ್ರತಿಜ್ಞಾ ಬದ್ಧ ಸಂಬಂಧ ಹೊಂದಿದ್ದರು. ಹಾಗೆ ಬುಕೈರ್ ಮತ್ತು ಅವರ ಎಲ್ಲಾ ಪುತ್ರರು ಬನೂ ನಫೀಲ್‌ರೊಂದಿಗೆ ಪ್ರತಿಜ್ಞಾಬದ್ಧರಾಗಿದ್ದರು. ಹಝ್ರತ್ ಆಖಿಲ್, ಹಝ್ರತ್ ಆಮಿರ್, ಹಝ್ರತ್ ಅಯಾಸ್ ಮತ್ತು ಹಝ್ರತ್ ಖಾಲಿದ್ ಈ ನಾಲ್ವರು ಸಹೋದರರು ಬುಕೈರ್‌ರವರ ಪುತ್ರರಾಗಿದ್ದರು. ಅವರೆಲ್ಲ ಒಟ್ಟಿಗೆ ದಾರ್ ಅರ್‌ಖುಮ್‌ನಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದರು. ದಾರ್ ಅರ್‌ಖುಮ್‌ನಲ್ಲಿ ಎಲ್ಲರಿಗಿಂತ ಮೊದಲು ಮುಸ್ಲಿಮರಾದವರು ಅವರಾಗಿದ್ದರು. ಹಝ್ರತ್ ಆಖಿಲ್, ಹಝ್ರತ್ ಖಾಲಿದ್, ಹಝ್ರತ್ ಆಮಿರ್ ಮತ್ತು ಹಝ್ರತ್ ಅಯಾಸ್ ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಅವರು ತಮ್ಮ ಕುಟುಂಬದ ಎಲ್ಲಾ ಪುರುಷ ಮತ್ತು ಮಹಿಳೆ ಸಂಬಂಧಿಕರನ್ನು ಒಟ್ಟುಗೂಡಿಸಿ ಹಿಜ್‌ರತ್ ಮಾಡಿದರು. ಮಕ್ಕದಲ್ಲಿ ಅವರ ಮನೆಗಳಲ್ಲಿ ಯಾರೂ ಬಾಕಿಯಾಗಿ ಉಳಿದಿರಲಿಲ್ಲ. ಮನೆಯ ಬಾಗಿಲು ಮುಚ್ಚಿಬಿಡಲಾಗಿತ್ತು. ಅವರೆಲ್ಲರೂ ಮದೀನದಲ್ಲಿ ಹಝ್ರತ್ ರಿಫಾಅ ಬಿನ್ ಅಬ್ದುಲ್ ಮುಂಝಿರ್‌ರವರ ಮನೆಯಲ್ಲಿ ವಾಸಿಸಿದರು. ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಆಖಿಲ್ ಮತ್ತು ಹಝ್ರತ್ ಮುಬಶ್ಶಿರ್ ಬಿನ್ ಅಬ್ದುಲ್ ಮುಂಝಿರ್ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಅವರಿಬ್ಬರೂ ಬದರ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಆಖಿಲ್ ಬದರ್ ಯುದ್ಧದಲ್ಲಿ ಶಹೀದರಾಗುವಾಗ ಅವರ ಪ್ರಾಯ 34 ಆಗಿತ್ತು. ಮಾಲಿಕ್ ಬಿನ್ ಝುಹೈರ್ ಜೌಶಮೀ ಅವರನ್ನು ಶಹೀದರನ್ನಾಗಿ ಮಾಡಿದನು. ಇಬ್ನು ಇಸ್‌ಹಾಖ್ ಎಂಬ ಚರಿತ್ರೆಗಾರ ಹೇಳುತ್ತಾರೆ: ಹಝ್ರತ್ ಅಯಾಸ್ ಮತ್ತು ಅವರ ಸಹೋದರರಾದ ಹಝ್ರತ್ ಆಖಿಲ್ ಹಝ್ರತ್ ಖಾಲಿದ್ ಮತ್ತು ಹಝ್ರತ್ ಆಮಿರ್ ಎಂಬವರ ಹೊರತು ಬೇರೆ ಯಾವ ನಾಲ್ವರು ಸಹೋದರರೂ ಬದರ್ ಯುದ್ಧದಲ್ಲಿ ಒಟ್ಟಿಗೆ ಸೇರಿ ಭಾಗವಹಿಸಿರಲಿಲ್ಲ.

ಝೈದ್ ಬಿನ್ ಅಸ್‌ಲಮ್ ವರದಿ ಮಾಡುತ್ತಾರೆ: ಅಬೂ ಬುಕೈರ್‌ರ ಪುತ್ರರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ವಿನಂತಿಸಿದರು, ಅಲ್ಲಾಹನ ಸಂದೇಶವಾಹಕರೇ, ನಮ್ಮ ಸಹೋದರಿಯ ವಿವಾಹ ಇಂತಿಂತಹ ವ್ಯಕ್ತಿಯೊಂದಿಗೆ ಮಾಡಿಸಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬಿಲಾಲ್ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅವರಿಗೆ ಬಿಲಾಲ್ ಬಗ್ಗೆ ಇಷ್ಟವಿರಲಿಲ್ಲ. ಆದುದರಿಂದ ಅವರು ಮರಳಿ ಹೋದರು. ಆ ಸಹೋದರರು ದ್ವಿತೀಯ ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿನಂತಿಸಿದರು. ನಮ್ಮ ಸಹೋದರಿಯ ವಿವಾಹ ಇಂತಿಂತಹ ವ್ಯಕ್ತಿಯೊಂದಿಗೆ ಮಾಡಿಸಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಬಿಲಾಲ್ ಬಗ್ಗೆ ನಿಮ್ಮ ಅಭಿಪ್ರಾಯವೇನು? ಆಗ ಆ ಸಹೋದರರು ಮರಳಿ ಹೋದರು. ಆ ಸಹೋದರರು ಮೂರನೆಯ ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಿ ವಿನಂತಿಸಿದರು. ನಮ್ಮ ಸಹೋದರಿಯ ವಿವಾಹ ಇಂತಿಂತಹ ವ್ಯಕ್ತಿಯೊಂದಿಗೆ ಮಾಡಿಸಿರಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪುನಃ ಹೇಳಿದರು: ಬಿಲಾಲ್ ಬಗ್ಗೆ ನಿಮ್ಮ ಅಭಿಪ್ರಾಯವೇನು? ಸ್ವರ್ಗಕ್ಕೆ ಅರ್ಹರಾದವರ ಪೈಕಿ ಒಬ್ಬನಾಗಿರುವವನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂದು ಹೇಳಿದರು. ಆ ಮಾತನ್ನು ಆಲಿಸಿ ಅವರು ತಮ್ಮ ಸಹೋದರಿಯ ವಿವಾಹ ಬಿಲಾಲ್‌ರೊಂದಿಗೆ ಮಾಡಿಸಿದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಝೈದ್ ಬಿನ್ ಹಾರಿಸ(ರ). ಅವರ ಪಿತನ ಹೆಸರು ಹಾರಿಸ ಬಿನ್ ಶರ್‌ಹೀಲ್

ಎಂದೂ ಹಾರಿಸ ಬಿನ್ ಶರ್‌ಹಬೀಲ್ ಎಂದೂ ಹೇಳಲಾಗುತ್ತದೆ. ಅವರು ಬನೂ ಖುಝಾಅ ಗೋತ್ರದೊಂದಿಗೆ ಸಂಬಂಧ ಹೊಂದಿದ್ದರು. ಹಝ್ರತ್ ಝೈದ್ ಚಿಕ್ಕವರಾಗಿದ್ದಾಗ ಅವರ ತಾಯಿ ಅವರನ್ನು ಕರೆದುಕೊಂಡು ತವರು ಮನೆಗೆ ಹೋಗುತ್ತಿದ್ದಾಗ ಬನೂ ಖೈಸ್ ಗೋತ್ರದವರು ಸಹ ಆ ದಾರಿಯಲ್ಲಿ ಸಾಗುತ್ತಿದ್ದರು. ದಾರಿಮಧ್ಯೆ ಅವರು ಹಾಕಿದ ಡೇರೆಯ ಮುಂಬಾಗದಿಂದ ಸಾಗುತ್ತಿದ್ದಾಗ ಅವರು ಹಝ್ರತ್ ಝೈದ್‌ರನ್ನು ಅಪಹರಿಸಿ ಗುಲಾಮನನ್ನಾಗಿ ಮಾಡಿ ಔಕಾಝುದ ಬಜಾರಿನಲ್ಲಿ ಹಕೀಂ ಬಿನ್ ಹಝಾಮ್‌ನಿಗೆ ನಾಲ್ಕು ನೂರು ದಿರ್‌ಹಂಗೆ ಮಾರಿದರು. ಹಕೀಮ್ ಬಿನ್ ಹಝಾಮ್ ತನ್ನ ಪಿತೃ ಸಹೋದರಿಯಾದ ಹಝ್ರತ್ ಖದೀಜ ಬಿನ್ತ್ ಖುವೈಲಿದ್‌ರಿಗೆ ಹಝ್ರತ್ ಝೈದರನ್ನು ನೀಡಿದರು. ನಂತರ ಹಝ್ರತ್ ಖದೀಜರು ತನ್ನ ಎಲ್ಲಾ ಗುಲಾಮರೊಂದಿಗೆ ಹಝ್ರತ್ ಝೈದರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಶಕ್ಕೆ ನೀಡಿದರು. ಅತ್ತ ಹಝ್ರತ್ ಝೈದ್ ಕಾಣೆಯಾದ ಬಗ್ಗೆ ಅವರ ಪಿತ ಹಾರಿಸರಿಗೆ ಬಹಳ ದುಃಖವಾಗಿತ್ತು. ಬನೂ ಕಲ್ಬ್ ಗೋತ್ರದ ಕೆಲವರು ಹಜ್ ಮಾಡಲು ಮಕ್ಕಕ್ಕೆ ಬಂದಾಗ ಅವರು ಹಝ್ರತ್ ಝೈದರನ್ನು ಗುರುತಿಸಿದರು. ಹಝ್ರತ್ ಝೈದ್ ಅವರೊಂದಿಗೆ ಹೇಳಿದರು: ನನ್ನ ಕುಟುಂಬದ ಜನರೊಂದಿಗೆ ಹೇಳಿರಿ– ನಾನು ಕಅಬದ ಸಮೀಪ ಬನೂ ಮುಆದ್ ಗೋತ್ರದ ಒಂದು ಗೌರವಾನ್ವಿತ ಕುಟುಂಬದಲ್ಲಿ ವಾಸಿಸುತ್ತಿದ್ದೇನೆ. ಆದುದರಿಂದ ನೀವು ದುಃಖಿಸಬೇಡಿರಿ. ಬನೂ ಕಲ್ಬ್ ಗೋತ್ರದ ಜನರು ಮರಳಿ ಹೋದಾಗ ಝೈದರ ಪಿತನಿಗೆ ಈ ವಿಷಯ ಹೇಳಿದರು. ಆಗ ಅವರು ಹೇಳಿದರು: ಕಅಬದ ಪ್ರಭುವಿನಾಣೆ ನೀವು ಕಂಡದ್ದು ನನ್ನ ಪುತ್ರನನ್ನೇ? ಜನರು ಅವರ ಮೈಬಣ್ಣ ಮತ್ತು ಇತರ ಲಕ್ಷಣಗಳನ್ನು ವಿವರಿಸಿ ಹೇಳಿದಾಗ ಝೈದರ ಪಿತ ಹಾರಿಸ ಮತ್ತು ಚಿಕ್ಕಪ್ಪ ಕಅಬ್ ಮಕ್ಕಕ್ಕೆ ಹೋಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾದರು. ಪರಿಹಾರ ದ್ರವ್ಯ ಪಡೆದು ತಮ್ಮ ಪುತ್ರನನ್ನು ಬಿಟ್ಟುಕೊಡಲು ಅಪೇಕ್ಷಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈದರನ್ನು ಕರೆದು ಅವರ ಅಭಿಪ್ರಾಯವೇನೆಂದು ಕೇಳಿದರು. ಝೈದ್ ತನ್ನ ತಂದೆ ಮತ್ತು ಚಿಕ್ಕಪ್ಪರ ಜೊತೆಗೆ ಹೋಗಲು ಒಪ್ಪಲಿಲ್ಲ. ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ನಾನು ಎಲ್ಲಾ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡುತ್ತೇನೆ' ಎಂದು ಪ್ರಕಟಿಸಿದಾಗ ಎಲ್ಲಾ ಗುಲಾಮರು ಹೊರಟು ಹೋದರು. ಆದರೆ ಝೈದ್ ಬಿನ್ ಹಾರಿಸ – ಅನಂತರ ಅವರು ಹಝ್ರತ್ ಪೈಗಂಬರರ ಪುತ್ರನಾಗಿ ಪ್ರಸಿದ್ಧರಾದರು – ಹಝ್ರತ್ ಪೈಗಂಬರರ ಸಮೀಪಕ್ಕೆ ಬಂದು ಹೇಳಿದರು: ತಾವು ನನ್ನನ್ನು ಸ್ವತಂತ್ರನನ್ನಾಗಿ ಮಾಡಿರುವಿರಿ. ಆದರೆ ನಾನು ಸ್ವತಂತ್ರನಾಗಲು ಬಯಸುವುದಿಲ್ಲ. ನಾನು ತಮ್ಮ ಬಳಿಯೇ ವಾಸಿಸುವೆನು ಎಂದು ಹೇಳಿದರು. ಹಝ್ರತ್ ಪೈಗಂಬರರು ಝೈದರೊಂದಿಗೆ ಹೇಳಿದರು: 'ನೀನು ನಿನ್ನ ಊರಿಗೆ ಹೋಗಿ ಸಂಬಂಧಿಕರನ್ನು ಸೇರಿಕೋ. ಈಗ ನೀನು ಸ್ವತಂತ್ರನಾಗಿರುವೆ'. ಆಗ ಹಝ್ರತ್ ಝೈದ್ ಹೇಳಿದರು: ನಾನು ತಮ್ಮಲ್ಲಿ ಕಂಡ ಪ್ರೀತಿವಾತ್ಸಲ್ಯದ ಕಾರಣದಿಂದ ತಾವು ನನಗೆ ಎಲ್ಲರಿಗಿಂತ ಹೆಚ್ಚು ಪ್ರಿಯರಾಗಿರುವಿರಿ. ಝೈದ್ ಒಂದು ಐಶ್ವರ್ಯವಂತ ಕುಟುಂಬದವರಾಗಿದ್ದರು. ಅವರನ್ನು ಚಿಕ್ಕ ವಯಸ್ಸಿನಲ್ಲಿ ಡಕಾಯಿತಿಗಾರರು ಅಪಹರಿಸಿದ್ದರು. ಅವರು ಅನಂತರ ಅವರನ್ನು ಗುಲಾಮನಾಗಿ ಮಾರಾಟ ಮಾಡಿದ್ದರು. ಕೊನೆಗೆ ಅವರು ಹಝ್ರತ್ ಖದೀಜರ ವಶಕ್ಕೆ ಬಂದರು. ಅವರ ತಂದೆ ಮತ್ತು ಚಿಕ್ಕಪ್ಪ ಅವರನ್ನು ಹುಡುಕುತ್ತಾ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದು ಹೇಳಿದರು: ನಾವು ತಮ್ಮ ಘನತೆಯನ್ನೂ ಔದಾರ್ಯವನ್ನೂ ಆಲಿಸಿ ಬಂದೆವು. ತಮ್ಮ ಬಳಿ ನಮ್ಮ ಪುತ್ರ ಗುಲಾಮನಾಗಿದ್ದಾನೆ. ಅವನ ಬಿಡುಗಡೆಗೆ ಪರಿಹಾರವಾಗಿ ತಾವು ಅಪೇಕ್ಷಿಸುವುದನ್ನು ನೀಡಲು ನಾವು ಸಿದ್ಧರಿದ್ದೇವೆ. ತಾವು ಅವನನ್ನು ಸ್ವತಂತ್ರನನ್ನಾಗಿ ಮಾಡಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಮ್ಮ ಪುತ್ರ ನನ್ನ ಗುಲಾಮನಾಗಿಲ್ಲ. ನಾನು ಅವನನ್ನು ಸ್ವತಂತ್ರನನ್ನಾಗಿ ಮಾಡಿರುವೆನು. ಅನಂತರ ಅವರು ಝೈದರನ್ನು ಕರೆದು ಹೇಳಿದರು: ನಿನ್ನ ತಂದೆ ಮತ್ತು ಚಿಕ್ಕಪ್ಪ ನಿನ್ನನ್ನು ಕರೆದುಕೊಂಡು ಹೋಗಲು ಬಂದಿದ್ದಾರೆ. ನಾನು ನಿನ್ನನ್ನು ಸ್ವತಂತ್ರನನ್ನಾಗಿ ಮಾಡಿರುವೆನು. ನೀನು ಈಗ ನನ್ನ ಗುಲಾಮನಲ್ಲ. ನೀನು ಅವರೊಂದಿಗೆ ಹೋಗಬಹುದು ಎಂದು ಹೇಳಿದರು. ಹಝ್ರತ್ ಝೈದ್ ಹೇಳಿದರು: ತಾವು ನನ್ನನ್ನು ಸ್ವತಂತ್ರನನ್ನಾಗಿ ಮಾಡಿರುವಿರಿ. ಆದರೆ ನಾನು ಸ್ವತಂತ್ರನಾಗಿರಲು ಇಚ್ಛಿಸುವುದಿಲ್ಲ. ನಾನು ನನ್ನನ್ನು ನಿಮ್ಮ ಗುಲಾಮನನ್ನಾಗಿಯೇ ಭಾವಿಸುತ್ತೇನೆ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿನ್ನ ತಾಯಿ ಬಹಳ ದುಃಖದಲ್ಲಿದ್ದಾರೆ. ನಿನ್ನ ಪಿತ ಮತ್ತು ಚಿಕ್ಕಪ್ಪ ಎಷ್ಟು ದೂರದಿಂದ ನಿನ್ನನ್ನು ಕರೆದುಕೊಂಡು ಹೋಗಲು ಬಹಳ ಕಷ್ಟ ಅನುಭವಿಸಿ ಇಲ್ಲಿಗೆ ಆಗಮಿಸಿದ್ದಾರೆ. ನೀನು ಅವರ ಜೊತೆಗೆ ಹೋಗು. ಝೈದರ ತಂದೆ ಮತ್ತು ಚಿಕ್ಕಪ್ಪ ಸಹ ಬಹಳ ಒತ್ತಾಯಿಸಿದರು. ಆದರೆ ಝೈದ್ ಅವರ ಜೊತೆ ಹೋಗಲು ನಿರಾಕರಿಸಿದರು ಮತ್ತು ಹೇಳಿದರು: ನಿಸ್ಸಂಶಯವಾಗಿ ತಾವು ನನ್ನ ಪಿತ ಮತ್ತು ಚಿಕ್ಕಪ್ಪ ಆಗಿರುವಿರಿ. ನೀವು ನನ್ನನ್ನು ಬಹಳ ಪ್ರೀತಿಸುತ್ತಿರುವಿರಿ. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥಾಪಿತವಾದ ನನ್ನ ಸಂಬಂಧ ಮುರಿಯಲಾರದು. ಅವರಿಂದ ದೂರ ಸರಿದು ನಾನು ಜೀವದಿಂದಿರಲಾರೆ. ಝೈದ್ ಈ ಮಾತುಗಳನ್ನು ಹೇಳಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅಬ ದೇವಾಲಯಕ್ಕೆ ಹೋಗಿ ಘೋಷಿಸಿದರು: ಝೈದ್ ಪ್ರಕಟಿಸಿದ ಪ್ರೀತಿಯ ಕಾರಣದಿಂದ ಇಂದಿನಿಂದ ಝೈದ್ ನನ್ನ ಪುತ್ರನಾಗಿದ್ದಾನೆ. ಆಗ ಝೈದರ ಪಿತ ಮತ್ತು ಚಿಕ್ಕಪ್ಪ ಸಂತೋಷಗೊಂಡರು ಮತ್ತು ಸಂತೋಷದಿಂದ ಮರಳಿ ಹೋದರು. ಏಕೆಂದರೆ ಅವರು ನೋಡಿದ್ದರು ಝೈದ್ ಬಹಳ ಸುಖದಿಂದ ಜೀವಿಸುತ್ತಿದ್ದಾರೆ ಎಂದು. ಇದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಪೂರ್ಣ ಸದ್ಗುಣದ ಸಾಕ್ಷ್ಯಾಧಾರವಾಗಿದೆ. ಝೈದ್ ತನ್ನ ನಿಷ್ಠೆಯನ್ನು ಪ್ರಕಟಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಸಾಧಾರಣವಾದ ಔದಾರ್ಯವನ್ನು ಪ್ರಕಟಿಸಿದರು.

ಈ ಘಟನೆ ಬಗ್ಗೆ ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ

ಇನ್ನಷ್ಟು ವಿವರಣೆಗಳು ಇವೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಝೈದ್ ನನ್ನ ವಾರೀಸುದಾರನಾಗುವನು, ನಾನು ಅವನ ವಾರೀಸುದಾರನಾಗುವೆನು. ಆ ದಿನದಿಂದ ಹಝ್ರತ್ ಝೈದ್‌ರನ್ನು ಝೈದ್ ಬಿನ್ ಮುಹಮ್ಮದ್ ಎಂದು ಕರೆಯಲಾಗುತ್ತಿತ್ತು. ಆದರೆ ಹಿಜ್ರತ್ ನಂತರ ಅಲ್ಲಾಹನಿಂದ ಹೀಗೆ ಆಜ್ಞೆ ಅವತೀರ್ಣಗೊಂಡಿತು. ಕೇವಲ ಬಾಯಿ ಮಾತಿನಲ್ಲಿ ಪುತ್ರ ಎಂದು ಕರೆದು ಪುತ್ರನನ್ನಾಗಿ ಮಾಡಿಕೊಳ್ಳುವುದು ನಿಷಿದ್ಧವಾಗಿದೆ. ಅನಂತರ ಝೈದರನ್ನು ಝೈದ್ ಬಿನ್ ಹಾರಿಸ ಎಂದು ಕರೆಯಲು ತೊಡಗಿದರು. ಆದರೆ ಈ ನಿಷ್ಠಾವಂತ ಸೇವಕನೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪ್ರೀತಿ ಮೊದಲಿಗಿಂತ ಮಿಗಿಲಾಗಿ ಇತ್ತು ಮತ್ತು ಅದು ವರ್ಧಿಸುತ್ತಾ ಇತ್ತು. ಝೈದರು ಮೃತನಾದ ನಂತರ ಅವರ ಪುತ್ರ ಉಸಾಮ ಬಿನ್ ಝೈದ್‌ರೊಂದಿಗೆ ಅದೇ ರೀತಿಯ ಪ್ರೀತಿ ವಾತ್ಸಲ್ಯವಿತ್ತು. ಉಸಾಮರ ತಾಯಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕಿ ಉಮ್ಮು ಐಮನ್ ಆಗಿದ್ದರು. ಝೈದರ ವೈಶಿಷ್ಟ್ಯತೆ ಏನೆಂದರೆ ಎಲ್ಲಾ ಸಹಾಬರ ಪೈಕಿ ಝೈದರ ಹೆಸರು ಮಾತ್ರ ಸ್ಪಷ್ಟವಾಗಿ ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಹಝ್ರತ್ ಝೈದ್‌ರ ಅಣ್ಣ ಹಝ್ರತ್ ಜಬಲರೊಂದಿಗೆ ಒಮ್ಮೆ ಯಾರೋ ಕೇಳಿದರು: ನಿಮ್ಮಿಬ್ಬರಲ್ಲಿ ಹಿರಿಯವನು ಯಾರು? ಆಗ ಹಝ್ರತ್ ಜಬಲ ಹೇಳಿದರು: ನಾನು ಝೈದನಿಗಿಂತ ಮೊದಲು ಜನಿಸಿದರೂ ಝೈದ್ ನನಗಿಂತ ಹಿರಿಯನಾಗಿದ್ದಾನೆ. ಅವರು ಹೇಳಿದುದರ ಅರ್ಥ, ಹಝ್ರತ್ ಝೈದ್ ನನಗಿಂತ ಮೊದಲು ಮುಸ್ಲಿಮರಾದ ಕಾರಣ ಅವರೇ ಶ್ರೇಷ್ಠರು ಎಂದಾಗಿತ್ತು. ಹಝ್ರತ್ ಬರಾಅ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈದರೊಂದಿಗೆ ಹೇಳಿದರು: **ಅನ್ತ ಅಖೂನಾ ವ ಮೌಲಾನ.** ನೀನು ನಮ್ಮ ಸಹೋದರ ಮತ್ತು ಸ್ನೇಹಿತನಾಗಿರುವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ನಿಕಟ ಸಂಬಂಧ ಸ್ಥಾಪಿಸಿದ ನಾಲ್ವರು ಇವರಾಗಿದ್ದಾರೆ. ಅವರ ಪತ್ನಿ ಹಝ್ರತ್ ಖದೀಜ, ಅವರ ಚಿಕ್ಕಪ್ಪನ ಪುತ್ರ ಹಝ್ರತ್ ಅಲಿ, ಅವರು ವಿಮೋಚಿಸಿದ ಗುಲಾಮ ಹಝ್ರತ್ ಝೈದ್, ಮತ್ತು ಅವರ ಸ್ನೇಹಿತ ಹಝ್ರತ್ ಅಬೂಬಕರ್. ಈ ನಾಲ್ವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಲು ಅವರಿಗಿದ್ದ ಸಾಕ್ಷ್ಯಾಧಾರವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂದೂ ಸುಳ್ಳು ಹೇಳುವವರಲ್ಲ ಎನ್ನುವುದಾಗಿದೆ.

ತಾಯಿಫ್‌ಗೆ ಪ್ರಯಾಣ ಮಾಡಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹಝ್ರತ್ ಝೈದ್ ಇದ್ದರು. ಅಲ್ಲಿ ಸಖೀಫ್ ಗೋತ್ರದ ಜನರು ವಾಸಿಸುತ್ತಿದ್ದರು. ಹಝ್ರತ್ ಅಬೂ ತಾಲಿಬರು ನಿಧನ ಹೊಂದಿದ ನಂತರ ಖುರೈಶಿಗಳು ಪುನಃ ಹಿಂಸಾಚಾರ ಪ್ರಾರಂಭಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈದ್ ಬಿನ್ ಹಾರಿಸರೊಂದಿಗೆ ತಾಯಿಫ್ ಕಡೆಗೆ ಹೋಗಿದ್ದರು. ಇದು ನಬವಿ ವರ್ಷ 10ರಲ್ಲಿ ಶವ್ವಾಲ್ ತಿಂಗಳಲ್ಲಿ ಕೆಲವು ದಿನಗಳು ಬಾಕಿಯಾಗಿದ್ದಾಗ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹತ್ತು ದಿನಗಳ ಕಾಲ ತಾಯಿಫ್‌ನಲ್ಲಿ ವಾಸಿಸಿದರು. ಈ ದಿನಗಳಲ್ಲಿ ಅವರು ತಾಯಿಫ್‌ನ ಎಲ್ಲಾ ಗಣ್ಯ ವ್ಯಕ್ತಿಗಳ ಬಳಿಗೆ ಹೋಗಿದ್ದರು. ಆದರೆ ಯಾರೂ ಅವರ ಸಂದೇಶವನ್ನು ಅಂಗೀಕರಿಸಲಿಲ್ಲ. ಅವರ ಯುವ ಜನರು ಸಂದೇಶವನ್ನು ಅಂಗೀಕರಿಸುವರೆಂಬ ಆತಂಕ ಅವರಲ್ಲಿ ತಲೆದೋರಿದಾಗ ಗಣ್ಯರು ಹೇಳಿದರು: ಓ ಮುಹಮ್ಮದ್ ನಮ್ಮ ನಗರದಿಂದ ಹೊರಟು ಹೋಗು. ನಿನ್ನ ಸಂದೇಶವನ್ನು ಅಂಗೀಕರಿಸಿದವರ ಜೊತೆ ಜೀವಿಸು. ಅನಂತರ ನಗರದ ಗಣ್ಯರು ಪುಂಡರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಉತ್ತೇಜಿಸಿದರು. ಆ ಪುಂಡರು ಕಲ್ಲೆಸೆಯಲು ತೊಡಗಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಎರಡು ಪಾದಗಳಿಂದ ರಕ್ತ ಹರಿಯಲು ಪ್ರಾರಂಭವಾಯಿತು. ಹಝ್ರತ್ ಝೈದ್ ಬಿನ್ ಹಾರಿಸ ಆ ಕಲ್ಲುಗಳು ತನ್ನ ಮೇಲೆ ಬೀಳುವಂತೆ ಪ್ರಯತ್ನಿಸುತ್ತಿದ್ದರು. ಅವರ ತಲೆಯ ಮೇಲೆ ಸಹ ಅನೇಕ ಗಾಯಗಳಾದುವು. ಈ ಘಟನೆಯ ಬಗ್ಗೆ ಇನ್ನೂ ಹೆಚ್ಚು ವಿವರಿಸಲಿಕ್ಕಿದೆ. ಮುಂದಿನ ವಾರ ವಿವರಿಸುವೆನು.

——————*****——————


***Friday Sermon delivered by Hadrath Khaleefatul Masih Al Khamis****(atba)*

*At, Masjid Mubarak, Islamabad, London, UK, On 07-06-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon